ಈ) ಬಿಡುಗಡೆಯಾದ ಹಣವೆಷ್ಟು;

ಉ) ಯೋಜನೆ ಪೂರ್ಣಗೊಳ್ಳಲು ಕಾಲಮಿತಿ ಇದೆಯೇ;

ಊ) ರೈಲು ಸಂಚಾರ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು): ಅ) ಕೊಟ್ಟೂರು–ಹರಿಹರ ಹೊಸ ರೈಲು ಮಾರ್ಗವು ರೈಲ್ವೆಯ ಅನುಮೋದಿತ ಯೋಜನೆಯಾಗಿದೆ.

ಆ) ಈಗಾಗಲೇ ಭೂ ಕಾಮಗಾರಿ ಮತ್ತು ಸಣ್ಣ ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಈ ಯೋಜನೆಯ ಒಟ್ಟು ವೆಚ್ಚವು ರೂ.124.13 ಕೋಟಿಗಳಾಗಿದ್ದು, ಕರ್ನಾಟಕ ಸರ್ಕಾರವು ಯೋಜನೆಯ ಶೇಕಡ 66% ವೆಚ್ಚವನ್ನು ಭರಿಸಬೇಕಿದೆ.

ಈ) ಕರ್ನಾಟಕ ಸರ್ಕಾರವು ರೂ.5.00 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಉ) ಪೂರ್ಣಗೊಳಿಸಲು ಯಾವುದೇ ದಿನಾಂಕವನ್ನು ನಿಗದಿಪಡಿಸಿರುವುದಿಲ್ಲ.

ಊ) ರೈಲು ಮಾರ್ಗ ಪೂರ್ಣಗೊಂಡ ನಂತರ, ರೈಲು ಸಂಚಾರವನ್ನು ಪ್ರಾರಂಭಿಸಲಾಗುವುದು.

1857(1792) ಶ್ರೀ ಜಿ. ಶಿವಣ್ಣ (ರಾಣಿಬೆನ್ನೂರು): ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ. ಗುಲ್ಕೋಸ್ ಬಾಯಲ್ಸ್ ಲಿಮಿಟೆಡ್ ಗೋಕಾಕ್, ಕೆ.ಎಸ್.ಐ.ಐ.ಡಿ.ಸಿ. ಷೇರುಗಳನ್ನು ರದ್ದಿ–ಸಿದ್ದಿ ಎಂಬುವವರಿಗೆ ಯಾವ ಕರಾರಿನ ಮೇಲೆ ಮಾರಾಟ ಮಾಡಿದ್ದೀರಿ;

ಆ) ಕರಾರಿನ ಪ್ರಕಾರ ರದ್ದಿ–ಸಿದ್ದಿಯವರು ವ್ಯಾಪಾರಸ್ಥರಿಗೆ ಕೊಡಬೇಕಾದ ಹಣ ಸಂದಾಯ ಮಾಡಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು): ಅ) ಕೆ.ಎಸ್.ಐ.ಐ.ಡಿ.ಸಿ. ಇವರು ಕೆ.ಜಿ. ಗುಲ್ಕೋ ಬಾಯಲ್ಸ್ ಲಿಮಿಟೆಡ್ ಇವರು ಹೊಂದಿರುವ ಷೇರುಗಳನ್ನು ರದ್ದಿ–ಸಿದ್ದಿ ಸ್ಟಾರ್ಚ್ & ಕೆಮಿಕಲ್ಸ್ ಲಿಮಿಟೆಡ್. ಇವರಿಗೆ ಮಾರಾಟ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

1859(2394) ಶ್ರೀ ಸೋಮಣ್ಣ ವಿ.(ಬಿನ್ನಿಪೇಟೆ): ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ನಂದಿನಿ ಪಾರ್ಲರ್ ಹಾಗೂ ಹಾಲು ಮಾರುವ ಏಜೆಂಟರುಗಳ ಸಂಖ್ಯೆ ಎಷ್ಟು?

ಆ) ನಂದಿನಿ ಪಾರ್ಲರ್ ನಗರದ ಎಲ್ಲಾ ಭಾಗಗಳಲ್ಲೂ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?